# ಸರ್ವಭಾವಮಯ ಶ್ರೀರಾಮಕೃಷ್ಣ

❖ ಸ್ವಾಮಿ ಭೂತೇಶಾನಂದ

ಭಗವಾನ್ ಶ್ರೀರಾಮಕೃಷ್ಣರು ತಮ್ಮ ಅಂತರಂಗ ಶಿಷ್ಯರಿಂದ ತಮ್ಮ ಬಗ್ಗೆ ಅವರ ಅಭಿಪ್ರಾಯವೇನು ಎಂದು ಆಗಾಗ ತಿಳಿದುಕೊಳ್ಳಬಯಸುತ್ತಿದ್ದರು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ತಮ್ಮ ಭಾವ ಮತ್ತು ಆದರ್ಶಗಳನ್ನು ತಮ್ಮ ಶಿಷ್ಯರು ಎಷ್ಟರಮಟ್ಟಿಗೆ ಗ್ರಹಿಸಿದ್ದಾರೆ ಎಂಬುದನ್ನು ತಿಳಿಯುವುದು ಶ್ರೀರಾಮಕೃಷ್ಣರ ಉದ್ದೇಶವಾಗಿತ್ತು. ಶ್ರೀರಾಮಕೃಷ್ಣ  ಪರಮಹಂಸರ ಭಾವ ಮತ್ತು ಆದರ್ಶವನ್ನು ಅರ್ಥೈಸುವುದು ಸುಲಭವೇ? ನಾನಾ ಜನರು ಈ ವಿಚಾರದಲ್ಲಿ ನಾನಾ ರೀತಿಯ ವ್ಯಾಖ್ಯಾನ ಮಾಡುತ್ತಿರುತ್ತಾರೆ. ಅವರು ಒಬ್ಬ ಸಾಧಕ ಎಂದು ಕೆಲವರು ಹೇಳುತ್ತಾರೆ; ಅವರು ಭವತಾರಿಣಿಯ ಪೂಜಾರಿ ಎಂದು ಮತ್ತೆ ಕೆಲವರು ಹೇಳುತ್ತಾರೆ; ಇನ್ನೂ ಕೆಲವರು ಅವರನ್ನು ಮಹಾಯೋಗಿ ಎಂದು ಕರೆಯುತ್ತಾರೆ. ಅವರವರ ಸಾಧನೆ, ಅನುಭವದಂತೆ ಜ್ಞಾನ. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು : "ಶ್ರೀರಾಮಕೃಷ್ಣರನ್ನು ಅರ್ಥಮಾಡಿಕೊಳ್ಳಲು ಶ್ರೀರಾಮಕೃಷ್ಣರಂತೆ ಆಗಬೇಕು." ಶ್ರೀರಾಮಕೃಷ್ಣರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯ. ಹಾಗೆಯೇ ಮತ್ತೊಬ್ಬ ರಾಮಕೃಷ್ಣರಾಗಿ, ರಾಮಕೃಷ್ಣರನ್ನು ಅರ್ಥಮಾಡಿಕೊಳ್ಳುವುದೂ ಸಹ ಎಂದೆಂದಿಗೂ ಅಸಂಭವ. ಕಾರಣ ಅವರು ಅನನ್ಯ. ಅವರು ಅನಂತ ಭಾವರಾಶಿಯ ಸೀಮೆಯಿಲ್ಲದ ಸಮುದ್ರ, ಆ ಸಮುದ್ರದ ಹತ್ತಿರ ಹೋಗುವುದೂ ಸಾಧ್ಯವಿಲ್ಲ. ಇನ್ನು ಅವರನ್ನು ಅವಗಾಹನೆ ಅಥವಾ ಪರಿಶೀಲನೆ ಮಾಡುವ ಶಕ್ತಿ ಎಲ್ಲಿ ಬರಬೇಕು? ಅದಲ್ಲದೆ ಮನುಷ್ಯನಿಗೆ ಬೇಕಾಗಿರುವುದು ಒಂದು ಬಿಂದು ಅಮೃತ.  ಅದು ದೊರೆತರೆ ಆತ ಅಮರನಾಗುತ್ತಾನೆ. ಹಾಗಿರುವಾಗ, ಇಡೀ ಅಮೃತ ಸಾಗರವನ್ನು ಅಳೆಯುವುದರಿಂದ ಪ್ರಯೋಜನವೇನು! ನಮ್ಮ ಬುದ್ಧಿ ಎಷ್ಟರಮಟ್ಟಿಗೆ ಶುದ್ಧವಾಗುತ್ತದೋ, ಅಷ್ಟರಮಟ್ಟಿಗೆ ನಾವು ಶ್ರೀರಾಮಕೃಷ್ಣರನ್ನು ಅರ್ಥಮಾಡಿಕೊಳ್ಳಬಲ್ಲೆವು."

ಆದ್ದರಿಂದ ಶ್ರೀರಾಮಕೃಷ್ಣರನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಎಂದರೆ ಸಮುದ್ರದ ಆಳವನ್ನು ಅಳೆದಂತೆ. ಅವರು ಆಗಾಗ ತಮ್ಮ ಅಂತರಂಗ ಶಿಷ್ಯರನ್ನು ಪ್ರಶ್ನಿಸುತ್ತಿದ್ದರು: "ನನ್ನನ್ನು ಕಂಡು ಏನನ್ನಿಸುತ್ತದೆ, ನನಗೆ ಎಷ್ಟರಮಟ್ಟಿಗೆ ಜ್ಞಾನೋದಯವಾಗಿದೆ?"  ಶ್ರೀರಾಮಕೃಷ್ಣರು ಶ್ರದ್ಧಾಭಕ್ತಿ ಮತ್ತು ವಿನಯದ ಪ್ರತಿಮೂರ್ತಿಯಾದ ಮಾಸ್ಟರ್ ಮಹಾಶಯರಿಗೆ ಹೀಗೊಮ್ಮೆ ಕೇಳಿದಾಗ ಅವರು, "ಈ ಪ್ರಶ್ನೆಗೆ ಉತ್ತರಿಸಲು ನನ್ನಲ್ಲಿ ಶಕ್ತಿಯಿಲ್ಲ. ಆದರೆ ಇಷ್ಟು ಮಾತ್ರ ನಾನು ಹೇಳಬಲ್ಲೆ: ವಿಶ್ವದಲ್ಲಿರುವ ಸಮಗ್ರ ಧರ್ಮಗಳ ಇತಿಹಾಸದಲ್ಲಿ ಇಂತಹವರು ಇದ್ದರೆಂದು ಎಲ್ಲಿಯೂ ನಾನು ಓದಿಲ್ಲ ಅಥವಾ ಕೇಳಿಲ್ಲ. ನಾವು ಎಷ್ಟು ತಾನೇ ಅರ್ಥಮಾಡಿಕೊಳ್ಳಬಹುದು?" ಶ್ರೀರಾಮಕೃಷ್ಣರು ಆತ್ಮಪ್ರಶಂಸೆಯನ್ನು ಕೇಳಲೋಸುಗ ಇಂತಹ ಪ್ರಶ್ನೆ ಹಾಕುತ್ತಿದ್ದರೆ? ಇಲ್ಲ. ಖಂಡಿತ ಹಾಗಲ್ಲ. ಇಂತಹ ಪ್ರಶ್ನೆಯನ್ನು ಕೇಳುವುದರ ಮೂಲಕ ತಮ್ಮ ಶಿಷ್ಯರು ಆಧ್ಯಾತ್ಮಿಕವಾಗಿ ಎಷ್ಟು ವಿಕಾಸ ಹೊಂದಿದ್ದಾರೆ ಎಂಬುದನ್ನು ಪರಿಶೀಲಿಸುತ್ತಿದ್ದರು. ಭಾಗವತದಲ್ಲಿ ಒಂದು ಕಡೆ ಬರುತ್ತದೆ: ಶ್ರೀಕೃಷ್ಣನ ಪಟ್ಟಮಹಿಷಿಯರು ಒಂದು ದಿನ ಆತನ ಮಹಿಮೆಯ ಸಂಬಂಧವಾಗಿ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು.  ಒಬ್ಬೊಬ್ಬರೂ  ಶ್ರೀಕೃಷ್ಣನ  ಗುಣಾವಳಿ, ಸೌಂದರ್ಯ, ಧೈರ್ಯ, ಕರುಣೆ ಇತ್ಯಾದಿಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದರು. ಆ ಸಮಯದಲ್ಲಿ ನಾರದರು ಆ ಕಡೆ ಹೋಗುತ್ತಿದ್ದರು. ಅವರು ಎಲ್ಲವನ್ನೂ ಕೇಳಿಸಿಕೊಂಡು ಆ ರಾಣಿಯರಿಗೆ ಶ್ರೀಕೃಷ್ಣನ ಮಹತ್ವದ ಬಗ್ಗೆ ಹೀಗೆ ತಿಳಿಸಿಕೊಟ್ಟರು : "ಅಂಶಗಳ ವ್ಯಾಖ್ಯಾನದಿಂದ ಸಮಗ್ರತೆಯ ಜ್ಞಾನವನ್ನು ಪಡೆಯಲಾಗುವುದಿಲ್ಲ."

ಭಗವಾನ್ ಶ್ರೀರಾಮಕೃಷ್ಣರ ಮಹಿಮೆಯ ಬಗ್ಗೆ ತಿಳಿಸಲು ಹೋದರೂ ಹಾಗೆಯೇ ತುಂಡುತುಂಡಾದ ಭಾವಗಳನ್ನು ವಿವರಿಸುವುದರಿಂದ ನಿಜವಾದ ಮೌಲ್ಯಮಾಪನವಾಗುವುದಿಲ್ಲ ಎಂಬುದು ವೇದ್ಯವಾಗುತ್ತದೆ. ಒಬ್ಬ ಭಕ್ತ ಹೇಗೆ ತನ್ನದೇ ಆದ ದೃಷ್ಟಿಯಲ್ಲಿ ಶ್ರೀರಾಮಕೃಷ್ಣರನ್ನು ನೋಡಿದ್ದನೋ ಹಾಗೆಯೇ ಶ್ರೀರಾಮಕೃಷ್ಣರು ಕೂಡ ಪ್ರತಿಯೊಬ್ಬರೊಡನೆ ಒಂದೇ ಭಾವದಿಂದ ವ್ಯವಹರಿಸುತ್ತಿರಲಿಲ್ಲ. ಅವರವರ ಭಾವಕ್ಕನುಗುಣವಾಗಿ ಮಾತುಕತೆಯಾಡುತ್ತಿದ್ದರು, ಸಾಧನೆಗೆ  ಉತ್ತೇಜನ ನೀಡುತ್ತಿದ್ದರು. ಗಿರೀಶ್ ಘೋಷನ ಜೊತೆಗೆ ಅವರ ಲೀಲೆ ಅದೆಷ್ಟು ಅಪೂರ್ವವಾದದ್ದು! ಗಿರೀಶ ಅವರನ್ನೇ ಬೈಯುವ ಮಟ್ಟಿಗೆ ಹೋಗುತ್ತಿದ್ದ. ನೆರೆದಿದ್ದ ಭಕ್ತರಿಗೆ ಅದು ಕೆಟ್ಟದಾಗಿ ಕಾಣುತ್ತಿತ್ತು. ಆದರೆ ಗಿರೀಶನ ಭಾವಕ್ಕೆ ತಕ್ಕಂತೆ ಅವನನ್ನು  ತಮ್ಮೆಡೆಗೆ ಆಕರ್ಷಿಸುವ ಶ್ರೀರಾಮಕೃಷ್ಣರ ಉಪಾಯವೂ ಅನನ್ಯವಾಗಿತ್ತು. ಗಿರೀಶ ಅವರಿಗೆ ಪ್ರಣಾಮ ಮಾಡಿದರೆ ಇವರು ಅವನಿಗೆ ಪ್ರತಿಪ್ರಣಾಮ ಸಲ್ಲಿಸುವರು. ಒಮ್ಮೆ



ರಾಮಕೃಷ್ಣ ಮಹಾಸಂಘದ ಹನ್ನೆರಡನೆಯ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿಯವರ "ಶ್ರೀರಾಮಕೃಷ್ಣೇರ್ ಭಾವಾದರ್ಶ" (ಪ್ರಕಾಶಕರು: ಉದ್ಬೋಧನ ಕಾರ್ಯಾಲಯ, ಕೊಲ್ಕತಾ) ಎಂಬ ಬಂಗಾಳಿ ಗ್ರಂಥದ ಒಂದು ಅಧ್ಯಾಯವನ್ನು ಸಂಗ್ರಹಾನುವಾದ ಮಾಡಿರುವ ಸ್ವಾಮಿ ಬೋಧಸ್ವರೂಪಾನಂದಜಿ, ರಾಮಕೃಷ್ಣ ಮಠ, ಬೇಲೂರು ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪರಸ್ಪರ ಪ್ರಣಾಮ ಮುಗಿಯಲೊಲ್ಲದು! ಕೊನೆಯಲ್ಲಿ ಸೋಲನ್ನು ಒಪ್ಪಿಕೊಂಡು ಗಿರೀಶ ಹೇಳುತ್ತಾನೆ, "ನಿಮ್ಮ ಬಳಿ ಪ್ರಣಾಮದಲ್ಲಿಯೂ ನಾನು ಸೋತುಹೋದೆ." ಶ್ರೀರಾಮಕೃಷ್ಣರ ಪ್ರೀತಿ ಗಿರೀಶನನ್ನು ಅವರ ಗುಲಾಮನನ್ನಾಗಿಸಿತು. ಭಕ್ತ ಗಿರೀಶನು ಅವರಿಗೆ ಒಮ್ಮೆ ಹೇಳಿದ, "ನಿಮ್ಮ ಕಷ್ಟವನ್ನು ನಾನು ನೋಡಲಾರೆ. ಆ ಕಂಠವ್ಯಾಧಿಯನ್ನು ನನಗೆ ಕೊಡಿ." ಆದರೆ ರಾಮಕೃಷ್ಣರು ಅದನ್ನು ಮಾಡಬಲ್ಲರೇ! ಸುಡುತ್ತಿರುವ ರೋಗದ ಸಮಸ್ತ ಯಾತನೆಯನ್ನು ಸಹಿಸಿಕೊಂಡು ಅವರು ಪೂರ್ಣ ಅವತಾರದ ಪರಿಪೂರ್ಣ ಲೀಲೆಯನ್ನು ತೋರಿಸಲು ಬಯಸಿದ್ದರು.

ಇದು ಅವತಾರ ಪುರುಷರ ವೈಶಿಷ್ಟ್ಯ. ಭಾಗವತದಲ್ಲಿನ ಒಂದು ಪ್ರಸಂಗ ಹೀಗಿದೆ: ಬಾಲಕ ಶ್ರೀಕೃಷ್ಣ ಗೋವುಗಳನ್ನು ಮೇಯಿಸಿ ಮನೆಗೆ ವಾಪಸು ಬರುತ್ತಿದ್ದ. ಅವನ ಅಪರೂಪವಾದ ರೂಪರಾಶಿಯನ್ನು ಕಂಡು ಗೋಪಿಯರು ಮುಗ್ಧ ಕಣ್ಣುಗಳಿಂದ ನೋಡುತ್ತಿದ್ದರು. ಅದು ಅಂತಹ ಲೀಲೆ. ಒಬ್ಬನೇ ಕೃಷ್ಣನನ್ನು ಒಬ್ಬೊಬ್ಬರೂ ಒಂದೊಂದು ರೂಪದಲ್ಲಿ ನೋಡುತ್ತಿದ್ದರು. ಯಾರ ಅಂತರಂಗದಲ್ಲಿ ಯಾವ ಭಾವವೋ ಅವರು ಹಾಗೆಯೇ ಅವನನ್ನು ನೋಡಿದರು—ಕೆಲವರು ಗೆಳೆಯನ ರೂಪದಲ್ಲಿ, ಕೆಲವರು ಪತಿಯ ರೂಪದಲ್ಲಿ, ಕೆಲವರು ಪುತ್ರನ ರೂಪದಲ್ಲಿ, ಕೆಲವರು ಪ್ರಭುವಿನ ರೂಪದಲ್ಲಿ. ಒಂದೇ ಸಮಯದಲ್ಲಿ ಬೇರೆ ಬೇರೆ ನೋಡುಗರಿಗೆ ವಿಭಿನ್ನ ರೂಪದಿಂದ ಪ್ರಕಟವಾಗುವ ಸಾಮರ್ಥ್ಯ ಅವತಾರಪುರುಷರಿಗೆ ಮಾತ್ರ ಸಾಧ್ಯ.

ಭಗವಂತನು ನರಸಿಂಹಾವತಾರದಲ್ಲಿ ಅವತರಿಸಿದಾಗ ಹಿರಣ್ಯಕಶಿಪುವಿಗೆ ಅವನು ಸಾಕ್ಷಾತ್ ಮೃತ್ಯುಸ್ವರೂಪನಾಗಿದ್ದ; ಆದರೂ ಪ್ರಹ್ಲಾದನಿಗೆ ಅವನು ಪರಮ ಕರುಣಾಮಯ, ಸರ್ವಭಯಹರ, ಪ್ರೀತಿಯ ಆಗರ. ಆತನ ವೈಚಿತ್ರ್ಯವೆಷ್ಟು! ಯಾರು ಸರ್ವರನ್ನೂ ಉದ್ಧಾರ ಮಾಡಬಲ್ಲನೋ ಅವನಲ್ಲಿ ವೈಚಿತ್ರ್ಯ ಇರಲೇಬೇಕು.

ಶ್ರೀರಾಮಕೃಷ್ಣರು ಅದೇ ರೀತಿಯ ಲೀಲೆಯನ್ನು ತೋರಿಸಿ ಹೋಗಿದ್ದಾರೆ. ಕೆಲವರಿಗೆ ಅವರು ಅತಿ ಸಾಧಾರಣ ವ್ಯಕ್ತಿ—ಕಾಳಿ ಮಾತೆಯ ಭಕ್ತ ಮಾತ್ರ. ಇನ್ನು ಕೆಲವರಿಗೆ ಅವರೊಬ್ಬ ಪುರುಷಸಿಂಹ. ಸಕಲ ಮೋಹಾಂಧಕಾರವನ್ನು ದೂರಮಾಡಲು ಜ್ಞಾನಖಡ್ಗವನ್ನು ಎತ್ತಿಹಿಡಿದಿದ್ದಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಕರ್ತಾ, ತಂದೆ, ಗುರು—ಈ ಮೂರನ್ನು ಕೇಳಿದರೆ ಶರೀರದಲ್ಲಿ ಮುಳ್ಳು ಚುಚ್ಚಿದಂತಾಗುತ್ತದೆ." ದೀನತೆಯೇ ಆ ಕ್ಷಣದಲ್ಲಿ ಅವರ ಬಾಹ್ಯ ರೂಪ. ಮರುಕ್ಷಣದಲ್ಲಿ ಯಾರಿಗೋ ಅಭಯವೀಯುತ್ತಾರೆ, "ಭಯವೇಕೆ? ನಾನಿದ್ದೇನೆ" ಎಂದು. ಗೀತೆಯೂ ಅದೇ ಮಾತನ್ನು ಹೇಳುತ್ತದೆ **ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್** (೧೨.೭). ಮತ್ತೆ ಯಾರಿಗೋ ಹೇಳುತ್ತಾರೆ—"ಯಾರು ಸ್ವಲ್ಪವಾದರೂ ಸಾಧನೆ ಮಾಡಿದ್ದಾರೊ, ಅವರು ಇಲ್ಲಿಗೆ ಬಂದೇ ಬರಬೇಕು" ಎಂದು. ಈ ವಾಕ್ಯಗಳಲ್ಲಿ ಪರಸ್ಪರ ವಿರೋಧಾಭಾಸ ಇದ್ದಂತೆ ಮೇಲ್ನೋಟಕ್ಕೆ ಕಾಣಬಹುದು. ಆದರೆ ಇದರ ಉದ್ದೇಶಿತ ಅರ್ಥ ಇಷ್ಟೇ: ಯಾರು ಯಾವ ರೀತಿಯ ಅಧಿಕಾರ, ಯೋಗ್ಯತೆಗಳನ್ನು ಸಂಪಾದಿಸಿರುವರೋ ಅವರಿಗೆ ಅವರದೇ ಸಾಧನೆಯಲ್ಲಿ ಸಹಾಯ ಮಾಡಿ ಅವರು ಯಥಾರ್ಥ ಅವಲಂಬನೆ ಪಡೆಯುವಂತೆ, ಶ್ರೀರಾಮಕೃಷ್ಣರು ಅವರೊಡನೆ ನಡೆದುಕೊಳ್ಳುತ್ತಿದ್ದರು.

ಸಾಧಕರು ಯಾವ ಸ್ತರದಲ್ಲಿರುವರೋ ಅವತಾರಿಗಳು ಅವರಿಗೆ ಅದರಂತೆ ಉಪದೇಶವನ್ನು ಕೊಡುತ್ತಿರುತ್ತಾರೆ. ಈ ಪ್ರಸಂಗದಲ್ಲಿ ಶ್ರೀರಾಮಕೃಷ್ಣರು ಕೊಡುತ್ತಿದ್ದ ಉದಾಹರಣೆ ಮನಸ್ಸಿಗೆ ಬರುತ್ತಿದೆ. ಮರದ ಮೇಲೆ ಒಂದು ಊಸರವಳ್ಳಿ ಇದೆ. ಕೆಲವರು ಅದನ್ನು ಕೆಂಪು ಬಣ್ಣದ್ದಾಗಿ ನೋಡುತ್ತಾರೆ, ಕೆಲವರು ನೀಲಿ, ಕೆಲವರು ಬಿಳಿ, ಹಳದಿ ಇತ್ಯಾದಿ. ಅವರುಗಳು ಪರಸ್ಪರ ಚರ್ಚೆಮಾಡುತ್ತಾರೆ. ಆಗ ಆ ಮರದ ಕೆಳಗೆ ವಾಸ ಮಾಡುತ್ತಿದ್ದ ವ್ಯಕ್ತಿ ಹೇಳಿದ: "ನೀವು ಎಲ್ಲರೂ ಸರಿಯಾಗಿಯೇ ನೋಡಿದ್ದೀರಿ. ಆ ಊಸರವಳ್ಳಿ ಬಣ್ಣ ಬದಲಾಯಿಸುತ್ತಿರುತ್ತದೆ. ಅದರದು ಬಹುವಿಧ, ಬಹುಬಣ್ಣ. ಮತ್ತೊಮ್ಮೆ ವರ್ಣಹೀನವಾಗಿರುತ್ತದೆ ಕೂಡ. ಯಾರು ಭಿನ್ನ ಭಿನ್ನ ರೂಪವುಳ್ಳವನೋ ಅವನೇ ಮತ್ತೆ ನಿರಾಕಾರನೂ ಕೂಡ. ಯಾರದು ಯಾವ ದೃಷ್ಟಿಯೋ ಅವನು ಅದೇ ರೀತಿ ನೋಡುತ್ತಾನೆ. ಆದರೆ ಅವನ ಸಮೀಪ ವಾಸಿಸುವ ಭಕ್ತಿಯೋಗಿ ಭಗವಂತನ ಮಹಿಮೆಯನ್ನು ಕ್ರಮವಾಗಿ ಅರ್ಥ ಮಾಡಿಕೊಳ್ಳುತ್ತಾನೆ. ಸಾಧನೆಯನ್ನು ಮಾಡುತ್ತಾ ಮಾಡುತ್ತಾ ಜ್ಞಾನದೃಷ್ಟಿ ತೆರೆಯುತ್ತದೆ. ಎಷ್ಟು ಜನ ವಿದ್ವಾಂಸರು, ಪಂಡಿತರು ಶ್ರೀರಾಮಕೃಷ್ಣರ ಬಳಿಗೆ ಬಂದರು! ಎಲ್ಲರೂ ಆಶ್ಚರ್ಯಚಕಿತರಾದರು. ಅವರ ಭಾವದ ಅಂತ್ಯವನ್ನು ತಿಳಿಯಲಾಗಲಿಲ್ಲ ಅವರಿಗೆ.

ವೈಷ್ಣವ ಸಂಪ್ರದಾಯದ ವಿಖ್ಯಾತ ಪಂಡಿತ ಭಗವಾನ್‌ದಾಸ್ ಬಾಬಾಜಿಯ ದರ್ಶನ ಪಡೆಯಲು ಹೋದಾಗ ಶ್ರೀರಾಮಕೃಷ್ಣರಲ್ಲಿ ನಾವು ಕಾಣುವುದು ದೀನತೆ, ವಿನೀತವಾದ ನಮ್ರಭಾವ. ಆ ಸಮಯದಲ್ಲಿ ಬಾಬಾಜಿ ಯಾವುದೋ ವ್ಯಕ್ತಿಯ ವಿಚಾರಣೆ ನಡೆಸುತ್ತಿದ್ದರು. ಅವರು ಕೋಪಗೊಂಡು ಅವನಿಗೆ ಉಗ್ರ ಶಿಕ್ಷೆಯನ್ನು ವಿಧಿಸಿದರು. ಅದನ್ನು ಕೇಳಿ ರಾಮಕೃಷ್ಣರ ದೀನಭಾವ ಹೊರಟುಹೋಯಿತು. ಒಂದೇ ಸಲ ಗುರುವಿನ ಗುರು, ಶಿಕ್ಷಕರ ಶಿಕ್ಷಕನ ಭಾವ ಮೂಡಿ "ಶಿಕ್ಷೆ ವಿಧಿಸಲು ನೀನ್ಯಾರು?" ಎಂದು ಕೇಳಿದಾಗ ಭಗವಾನ್‌ದಾಸ್ ಸ್ತಂಭಿತರಾಗಿ ತತ್‌ಕ್ಷಣವೇ ತಮ್ಮ ಉದ್ಧಟತನಕ್ಕಾಗಿ ಕ್ಷಮೆಯಾಚಿಸಿದರು.

ತಮ್ಮ ಇಡೀ ಜೀವನದಲ್ಲಿ ಶ್ರೀರಾಮಕೃಷ್ಣರು ಒಂದು ಮಾತಿನ ಮೇಲೆ ಬಹಳ ಒತ್ತು ಕೊಟ್ಟಿದ್ದಾರೆ. ಅದಾವುದೆಂದರೆ, "ಯಾರು ಯಾವ ಭಾವದಲ್ಲಿರುತ್ತಾರೋ ಅವರ ಆ ಭಾವವನ್ನು ಎಂದಿಗೂ ನಷ್ಟಮಾಡಬಾರದು" ಎಂಬುದು. ಅಲ್ಲಿಂದಲೇ ಅವರಿಗೆ ಉತ್ತೇಜನ ನೀಡಬೇಕು. ಒಂದು ಸಲ ವಿವೇಕಾನಂದರು (ಆಗಿನ್ನೂ ನರೇಂದ್ರ) ತಮ್ಮ ಧ್ಯಾನದ ಸಮಯದಲ್ಲಿ ಸೋದರಶಿಷ್ಯರೊಬ್ಬರಿಗೆ ತಮ್ಮ ಮೊಣಕಾಲನ್ನು ಸ್ಪರ್ಶಿಸುವಂತೆ ಹೇಳಿದರು. ಸ್ವಲ್ಪ ಸಮಯದಲ್ಲೇ ಒಂದು ಶಕ್ತಿ ತರಂಗವು ತನ್ನ ದೇಹ

ಮನಸ್ಸುಗಳನ್ನೆಲ್ಲಾ ಆವರಿಸಿದಂತೆ ಆ ಸೋದರ ಶಿಷ್ಯನ ಅನುಭವಕ್ಕೆ ಬಂತು. ರಾಮಕೃಷ್ಣರು ಎಲ್ಲವನ್ನೂ ಕೇಳಿ ತಿಳಿದುಕೊಂಡು ನರೇಂದ್ರನನ್ನು ಬೈಯುತ್ತಾ ಹೇಳಿದರು—"ಏನಯ್ಯಾ ಸಂಪಾದಿಸುವುದಕ್ಕೆ ಮೊದಲೇ ಖರ್ಚು ಮಾಡಿದರೆ ಹೇಗೆ? ನೋಡು, ಆ ಹುಡುಗನ ಸಾಧನೆಯನ್ನೆಲ್ಲ ನಷ್ಟಮಾಡಿದೆಯಲ್ಲಾ! ಹಾಗೆಂದೂ ಮಾಡಬೇಡ. ಯಾರ ಭಾವವನ್ನೂ ನಷ್ಟಗೊಳಿಸಬಾರದು." ಸ್ವಾಮೀಜಿ ದೇಶವಿದೇಶಗಳ ತಮ್ಮ ಭಾಷಣಗಳಲ್ಲಿ, ಆಚರಣೆಯಲ್ಲಿ, ಗುರುಗಳ ಈ ನಿರ್ದೇಶನವನ್ನು ಸರ್ವಥಾ ಪಾಲಿಸಿದ್ದಾರೆ. ಜೀವನದುದ್ದಕ್ಕೂ ಅವರ ಈ ವಾಣಿಯನ್ನು ಪ್ರಚಾರ ಮಾಡಿದ್ದಾರೆ. ಅವತಾರಪುರುಷರು ಮಾತ್ರ ತಮ್ಮ ಸ್ವಂತ ಭಾವವನ್ನು ಇನ್ನೊಬ್ಬರಲ್ಲಿ ಪ್ರವೇಶಿಸುವಂತೆ ಪ್ರಭಾವ ಬೀರಬಲ್ಲರು. ಶ್ರೀರಾಮಕೃಷ್ಣರ ಬಣ್ಣದ ತೊಟ್ಟಿಯ ದೃಷ್ಟಾಂತವನ್ನು ಇಲ್ಲಿ ಸ್ಮರಿಸಬಹುದು. ಬಣ್ಣ ಹಾಕುವವನು ಯಾರು ಯಾವ ಬಣ್ಣ ಬಯಸುತ್ತಾರೋ ಆ ಬಣ್ಣದಲ್ಲಿ ಬಟ್ಟೆಯನ್ನು ಅದ್ದಿಕೊಡುತ್ತಾನೆ, ಹೀಗಿದ್ದರೂ ಬಣ್ಣದ ತೊಟ್ಟಿ ಒಂದೇ! ಪಕ್ಕದಲ್ಲಿ ನಿಂತಿದ್ದು ಈ ಎಲ್ಲವನ್ನು ನೋಡುತ್ತಿದ್ದವನು ಕೇಳಿದನು "ತೊಟ್ಟಿಯಲ್ಲಿರುವ ಆ ಬಣ್ಣವನ್ನು ನನಗೆ ಕೊಡು." ಯಾರು ಸರ್ವಶಕ್ತಿವಂತನೋ ಅವನಿಗೆ ಅಸಂಭವವಾದದ್ದು ಯಾವುದೂ ಇಲ್ಲ. ಸ್ವಾಮೀಜಿ ಅದನ್ನು ಅರ್ಥಮಾಡಿಕೊಂಡಿದ್ದರು. ಆದ್ದರಿಂದಲೇ ಅವರು ಹೇಳಿದ್ದು "ಶ್ರೀರಾಮಕೃಷ್ಣರು ಒಂದು ಹಿಡಿ ಧೂಳಿನಿಂದ ಲಕ್ಷ ಲಕ್ಷ ವಿವೇಕಾನಂದರನ್ನು ತಯಾರು ಮಾಡಬಲ್ಲರು" ಎಂದು.

ಒಂದು ದಿನ ಸ್ವಾಮೀಜಿಯ ಜೊತೆಯಲ್ಲಿ ಕೆಲವು ಗುರುಭಾಯಿಗಳು ದಕ್ಷಿಣೇಶ್ವರದಿಂದ ಕಲ್ಕತ್ತೆಗೆ ಬರುತ್ತಿದ್ದರು. ಶ್ರೀರಾಮಕೃಷ್ಣರು ಅವರ ಹೃದಯವನ್ನು ಆವರಿಸಿದ್ದರು. ಅವರ ಮಹಿಮೆಯ ಸಂಬಂಧವಾಗಿ ಮಾತುಕತೆ ನಡೆಯುತ್ತಿದೆ— ಅವರ ಅಪಾರ ಮತ್ತು ಅಸಾಧಾರಣ ಕರುಣೆ, ಭಕ್ತಿ, ಶಕ್ತಿ, ವೈರಾಗ್ಯ, ಈಶ್ವರಾನುಭೂತಿಯ ಬಗ್ಗೆ. ಸ್ವಾಮೀಜಿ ಹೇಳಿದರು, "ಶ್ರೀರಾಮಕೃಷ್ಣರು ಮತ್ತೇನೂ ಅಲ್ಲ, **L-O-V-E personified**—ಪ್ರೇಮದ ಸಾಕಾರಸ್ವರೂಪ." ಸ್ವಾಮೀಜಿ ಯಾವ ರೀತಿಯಾಗಿ ತಮ್ಮ ಗುರುದೇವರನ್ನು ಅರ್ಥಮಾಡಿಕೊಂಡಿದ್ದರೊ ಹಾಗೆ ಯಾರೂ ಅರ್ಥಮಾಡಿಕೊಂಡಿರಲಿಲ್ಲ ಎನಿಸುತ್ತದೆ. ರಾಮಕೃಷ್ಣರೇ ಸ್ವತಃ ಹೇಳಿದ್ದಾರೆ. ಭಗವಂತನಿಗೆ ಇತಿಮಿತಿಯೆಂಬುದಿಲ್ಲ, ಎಂದು. ಭಗವಾನ್ ಶ್ರೀರಾಮಕೃಷ್ಣರ ವಿಚಾರದಲ್ಲೂ ಅದೇ ಮಾತು ನಿಜ. ನಾವು ಒಬ್ಬೊಬ್ಬರೂ ಒಂದೊಂದು ಉಪ್ಪಿನ ಗೊಂಬೆ. ನಮಗೆ ಸಮುದ್ರವನ್ನು ಅಳೆಯುವ ಸಾಮರ್ಥ್ಯವಿಲ್ಲ. ನಾನು ಒಂದು ಇರುವೆಯಲ್ಲದೆ ಮತ್ತೇನು? ಸಕ್ಕರೆಯ ಎರಡು ಹರಳನ್ನು ಪಡೆದರೇ ಯಥೇಷ್ಟ. ಸಕ್ಕರೆಯ ಬೆಟ್ಟದಿಂದ ನನಗೆ ಆಗಬೇಕಾದುದೇನು? ಒಂದು ಸೇರು ಪಾತ್ರೆಯಲ್ಲಿ ಐದು ಸೇರು ನೀರು ಹಿಡಿಸುತ್ತದೆಯೇ? ಪಾತ್ರೆ ಕ್ಷುದ್ರವೂ ಸೀಮಿತವೂ ಆದಲ್ಲಿ, ಅನಂತವನ್ನು ಹೇಗೆ ತಾನೆ ಹಿಡಿಯಬಲ್ಲದು?

ನಾರದರು ಒಂದು ದಿನ ತಮ್ಮ ಪಾಡಿಗೆ ತಾವು ಹೋಗುತ್ತಿದ್ದರು. ಒಬ್ಬ ಭಕ್ತ ಅವರನ್ನು ಕೇಳಿದ: "ಭಗವಂತನು ಈಗ ಏನು ಮಾಡುತ್ತಿದ್ದಾನೆ?" ನಾರದರು ಹೇಳಿದರು, "ಈಗ ತಾನೇ ನೋಡಿ ಬಂದೆ, ಸೂಜಿಯ ಕಣ್ಣಿನ ಮೂಲಕ ಆನೆಯನ್ನು ನುಗ್ಗಿಸುತ್ತಿದ್ದನು." ಭಕ್ತನಿಗೆ ವಿಶ್ವಾಸವುಂಟಾಗಲಿಲ್ಲ; ಹೇಳಿದ, "ಅದು ಸಾಧ್ಯವೇ?" ಮತ್ತೆ ಸ್ವಲ್ಪದೂರ ಹೋಗಲು, ಇನ್ನೊಬ್ಬ ಭಕ್ತ ಅದೇ ಪ್ರಶ್ನೆಯನ್ನು ಕೇಳಲು, ನಾರದ ಮುನಿ ಅದೇ ಉತ್ತರ ಕೊಟ್ಟರು. ಭಕ್ತ ಭಕ್ತಿಯಿಂದ ತುಂಬಿದವನಾಗಿ ಹೇಳಿದ, "ಆಹಾ' ಅವನಿಗೆ (ಭಗವಂತನಿಗೆ) ಯಾವುದು ತಾನೆ ಸಾಧ್ಯವಿಲ್ಲ! ಯಾರು ಈ ಬ್ರಹ್ಮಾಂಡವನ್ನು ನಡೆಸುತ್ತಿದ್ದಾನೋ ಅವನಿಗೆ ಇದು ಅಂತಹ ಕಠಿಣ ಕೆಲಸವೇನಲ್ಲ."

ಅಂದಿನ ಕಾಲದ ಸುಶಿಕ್ಷಿತರಲ್ಲಿ, ಧಾರ್ಮಿಕ ಜೀವನ ನಡೆಸುತ್ತಿದ್ದವರಲ್ಲಿ ಅಥವಾ ಭಗವದ್ವಿಷಯವನ್ನು ಕುರಿತು ಚರ್ಚೆ ನಡೆಸುತ್ತಿದ್ದವರಲ್ಲಿ "ಈಶ್ವರನು ಸಾಕಾರನೊ ಅಥವಾ ನಿರಾಕಾರನೊ?" ಎಂಬುದು ವಿಶೇಷವಾಗಿ ತರ್ಕದ ವಿಷಯವಾಗಿತ್ತು. ಶ್ರೀರಾಮಕೃಷ್ಣರು ಜಗತ್ತಿನ ಮುಂದೆ ಮಹತ್ವಾದ ಒಂದು ಹೊಸ ವಿಚಾರವನ್ನು ತಿಳಿಸಿದ್ದಾರೆ. ಅವರ ಪ್ರಕಾರ "ಆತ ಸಾಕಾರನೂ ಹೌದು, ನಿರಾಕಾರನೂ ಹೌದು. ಅಷ್ಟೇ ಅಲ್ಲ ಅವನು ಸಾಕಾರ-ನಿರಾಕಾರಗಳಿಗಿಂತ ಭಿನ್ನನೂ ಕೂಡ." ಮಾಸ್ಟರ್ ಮಹಾಶಯರು ಅವರ ಬಳಿ ಆರಂಭದಲ್ಲೇ ಈ ಶಿಕ್ಷಣವನ್ನು ಪಡೆದರು. ಮಾಸ್ಟರ್ ಯೋಚಿಸುತ್ತಿದ್ದರು, "ಇದೇನು? ಯಾರು ಸಾಕಾರನೋ ಆತ ಮತ್ತೆ ನಿರಾಕಾರ ಹೇಗೆ ಆಗುತ್ತಾನೆ? ಒಬ್ಬನೇ ಎರಡು ವಿರುದ್ಧವಾದ ರೂಪ ಧರಿಸಬಲ್ಲನೇ? ಇದು ಸಾಧ್ಯವೇ?" ಈಗ ಮಾಸ್ಟರ್ ಮಹಾಶಯರು ಮಾತ್ರವಲ್ಲದೆ ಸಮಗ್ರ ಜಗತ್ತು ಈ ಸತ್ಯವನ್ನು ಸ್ವೀಕರಿಸುವಂತಾಗಿದೆ. ಶ್ರೀರಾಮಕೃಷ್ಣರ ಈಶ್ವರಾನುಭೂತಿ ಮತ್ತು ಅದರ ವ್ಯಾಖ್ಯೆ ಎಷ್ಟು ವಾಸ್ತವವಾದುದು ಮತ್ತು ಸರ್ವಸಮ್ಮತವಾದುದು ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ಕೇನೋಪನಿಷತ್ತಿನಲ್ಲಿದೆ, **ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ ತ್ವಂ ವೇತ್ಥ ಬ್ರಹ್ಮಣೋ ರೂಪಂ** ಒಂದು ವೇಳೆ ಬ್ರಹ್ಮನ್ನು ಚೆನ್ನಾಗಿ ಅರಿತಿದ್ದೇನೆ ಎಂದುಕೊಂಡರೆ ವಾಸ್ತವವಾಗಿ ನೀನು ಬ್ರಹ್ಮವನ್ನು ಅರಿತೇ ಇಲ್ಲ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಗಂಗಾಸ್ನಾನದ ಪುಣ್ಯವನ್ನು ಪಡೆಯಬೇಕಾದರೆ ಗೋಮುಖದಿಂದ ಗಂಗಾಸಾಗರದವರೆಗೆ ಅಖಂಡವಾಗಿ ಸ್ಪರ್ಶಿಸಬೇಕೇನು? ಗಂಗೆಯನ್ನು ಯಾವುದೋ ಒಂದು ಜಾಗದಲ್ಲಿ ಶ್ರದ್ಧೆ ವಿಶ್ವಾಸಗಳಿಂದ ಸ್ಪರ್ಶಿಸಿದರೆ ಅವಶ್ಯವಾಗಿ ಆ ಪುಣ್ಯಫಲ ಪ್ರಾಪ್ತಿಯಾಗುತ್ತದೆ. ಭಗವಂತನನ್ನು ಯಾರು ಯಾವ ರೀತಿ ಅರ್ಥಮಾಡಿಕೊಳ್ಳುತ್ತಾನೋ ಅದರಿಂದಲೇ ಆತ ಧನ್ಯನಾಗುತ್ತಾನೆ. ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲಂತೂ ಸಾಧ್ಯವಿಲ್ಲ. ಆದರೆ ನಾನು ಅರ್ಥ ಮಾಡಿಕೊಂಡಿದ್ದೇನೆ, ಅದು ಮಾತ್ರವೇ ಸರಿಯಾದ ಮಾರ್ಗ—ಈ ಹುಚ್ಚು ಭಾವನೆ ಬಿಡಬೇಕು." ಇಂತಹ ಭಾವನೆ ಅಭಿಮಾನದಿಂದ ಉಂಟಾಗುತ್ತದೆ. ಆ ಅನಂತದ ಒಂದು

ಕ್ಷಣವನ್ನು ಪಡೆಯಲು ಸಾಧ್ಯವಾದರೆ ಅದು ಆತನದೇ ಕೃಪೆಯೆಂದು ತಿಳಿಯಬೇಕು.

ಸ್ವಾಮಿ ವಿವೇಕಾನಂದರು ಮಾಡಿದ ಅಸಂಖ್ಯಾತ ಭಾಷಣಗಳು ಅವರ ಕಪೋಲಕಲ್ಪಿತವಲ್ಲ. ಎಲ್ಲವೂ ಶ್ರೀರಾಮಕೃಷ್ಣರ ಜೀವನ ವೆಂಬ ವೇದದಿಂದ, ಅವರ ಅಮೋಘವಾಣಿಯಿಂದ ಪಡೆದದ್ದು. ಸ್ವಾಮೀಜಿ ಅವರ ಉಪದೇಶಗಳನ್ನು ಕ್ರಮಬದ್ಧಗೊಳಿಸಿ, ಶಾಸ್ತ್ರ ಪ್ರಮಾಣದ ಸಹಾಯದಿಂದ ವ್ಯಾಖ್ಯಾನಿಸಿದ್ದಾರೆ. ಯಂತ್ರ ಮತ್ತು ಯಂತ್ರದ ಮಾಲೀಕ—ಶ್ರೀರಾಮಕೃಷ್ಣರು ನಡೆಸಿಕೊಂಡಂತೆ ನಡೆದವರು ಸ್ವಾಮಿ ವಿವೇಕಾನಂದರು. ಶ್ರೀರಾಮಕೃಷ್ಣ ಮತ್ತು ವಿವೇಕಾನಂದ ಇದು ಒಂದು ನೂತನ ಸಮನ್ವಯ. ಶ್ರೀರಾಮ ಕೃಷ್ಣರು ತಮ್ಮ ಸ್ವಂತ ಸಾಧನೆಗಳ ಸಂಪತ್ತಿನ ಸಾರವೆಲ್ಲವನ್ನೂ ಯಾರಿಗೆ ಕೊಟ್ಟು ಫಕೀರರಾಗಿ ಹೋದರೋ, ಆ ವಿವೇಕಾನಂದರು ತಮ್ಮ ಅಷ್ಟೆಲ್ಲಾ ಭಾಷಣಗಳ ಮಧ್ಯೆ ರಾಮಕೃಷ್ಣರ ನಾಮವನ್ನು ಕೂಡ ಉಲ್ಲೇಖಿಸಲಿಲ್ಲ. ಅನೇಕರು ಅವರಿಗೆ ಪ್ರಶ್ನಿಸಿದ್ದಾರೆ. ನೀವು ನಿಮ್ಮ ಗುರುದೇವರನ್ನು ಪ್ರಚಾರ ಮಾಡುವುದಿಲ್ಲ ಏಕೆ? ಸ್ವಾಮೀಜಿ ಯಾವಾಗಲೂ ಹೇಳುತ್ತಿದ್ದರು, "ಕಾರಣವಿದೆ. ವ್ಯಕ್ತಿಯ ಹೆಸರಿನ ಪ್ರಚಾರ ನನ್ನ ಗುರಿಯಲ್ಲ. ಭಾವದ (ಆದರ್ಶದ) ಪ್ರಚಾರ ಮಾಡಬೇಕು. ನಿರಪೇಕ್ಷ ಧರ್ಮನೀತಿಯನ್ನು ಅರ್ಥ ಮಾಡಿಸಲು ಪ್ರಯತ್ನಿಸಬೇಕು, ವ್ಯಕ್ತಿಯನ್ನಲ್ಲ" ಎಂದು.

ಶ್ರೀರಾಮಕೃಷ್ಣರು ಹೆಸರು ಕೀರ್ತಿಗಳನ್ನು ಇಷ್ಟಪಡುತ್ತಿರಲಿಲ್ಲ. ಹೊರಗಿನ ಆಚರಣೆಯಲ್ಲಿ ಅವರು ದೀನರಲ್ಲಿ ದೀನರಾಗಿದ್ದರೂ, ಎಷ್ಟು ನಿಖರ ಹಾಗೂ ಸುಂದರವಾದದ್ದು ಅವರ ಆದರ್ಶ—ಪರಿಪೂರ್ಣವಾಗಿ ಅಹಂಭಾವವನ್ನು ತ್ಯಜಿಸಿ ಗುಪ್ತವಾಗಿ ಇರುವುದು—ಸಂಯಮದ ಪರಾಕಾಷ್ಠೆ ಮತ್ತು ಗಂಭೀರವಾದ ಅಂತರ್ದೃಷ್ಟಿಯಿದ್ದಲ್ಲಿ ಮಾತ್ರ ಅದು ಸಾಧ್ಯ. ಗೀತೆಯಲ್ಲಿ ಇದರ ವಿಶಿಷ್ಟ ಉದಾಹರಣೆಯಿದೆ. ಶ್ರೀಕೃಷ್ಣ ಎಲ್ಲವನ್ನೂ ಮಾಡುತ್ತಿದ್ದರೂ ಎಲ್ಲೂ 'ಅಹಂ' ಭಾವವಿಲ್ಲ. ಶ್ರೀರಾಮಕೃಷ್ಣರು ಒಂದು ದಿನ ಮಾಸ್ಟರ್ ಮಹಾಶಯರನ್ನು ಪ್ರಶ್ನಿಸುತ್ತಾರೆ, "ನನ್ನ ಅಹಂ ಎಷ್ಟು ಇದೆ?" ಮಾಸ್ಟರ್ ಮಹಾಶಯರು ಹೇಳಿದರು, "ಹೌದು, ಸ್ವಲ್ಪ ಇಟ್ಟಿದ್ದೀರಿ, ಲೋಕಕಲ್ಯಾಣಕ್ಕೋಸ್ಕರ." ಇದನ್ನು ಕೇಳಿ ಶ್ರೀರಾಮಕೃಷ್ಣರು ಹೇಳಿದರು "ಇಲ್ಲ, ಇಲ್ಲ, ನಾನಿಟ್ಟಿಲ್ಲ, ತಾಯಿ ಇಟ್ಟಿದ್ದಾಳೆ." ಅವರ ಭಾವ ಸರ್ವದಾ "ತಾಯಿ ಯಂತ್ರಿ, ನಾನು ಯಂತ್ರ" ಎಂಬುದು. ಯಂತ್ರದಿಂದಲೂ ಅತಿ ಸಾಮಾನ್ಯವಾದ 'ಅಹಂ' ಭಾವವು ಹೋದರೆ ಆಗ ಮಾತ್ರ ಅದು ಸ್ಪಷ್ಟವಾದ ಸ್ವರವನ್ನು ಹೊರಹೊಮ್ಮಿಸುತ್ತದೆ. ಇಂತಹ 'ಅಹಂ' ನಿಶ್ಶೇಷವಾಗುವಿಕೆ ಅವತಾರ ವ್ಯಕ್ತಿಗಳಲ್ಲಿ ಮಾತ್ರ ಸಾಧ್ಯ. ವಿವಿಧ ವೈಚಿತ್ರ್ಯಗಳ ಒಡೆಯರಾದ, ಎಲ್ಲ ರೀತಿಯ ಅಭಿಮಾನದಿಂದ ಶೂನ್ಯರಾದ ಶ್ರೀರಾಮಕೃಷ್ಣರನ್ನು ಯಾರು ಎಷ್ಟರ ಮಟ್ಟಿಗೆ ತಮ್ಮ ಅನುಭವಕ್ಕೆ ತಂದುಕೊಳ್ಳುತ್ತಾರೋ, ಅರ್ಥಮಾಡಿಕೊಳ್ಳುತ್ತಾರೋ ಅದರಿಂದಲೇ ಅವರ ಉದ್ಧಾರ. ಸಾಧನೆಯ ಮೂಲಕ, ತಪಸ್ಸಿನ ಮೂಲಕ ಶ್ರೀರಾಮಕೃಷ್ಣರ ನಿರಂತರ ಸ್ಮರಣೆ ಮಾಡಬಲ್ಲೆವಾದರೆ ಆಗ ನಮ್ಮ ಸಾಧನೆ ಸ್ವಲ್ಪಮಟ್ಟಿಗಾದರೂ ಸಾರ್ಥಕವಾಗುತ್ತದೆ. ಆ ಶಕ್ತಿಯನ್ನು ಬೇಡುತ್ತಾ ಸರ್ವದಾ ಅವರ ಶ್ರೀಚರಣಗಳಲ್ಲಿ ಪ್ರಾರ್ಥನೆ ಮಾಡೋಣ. ✡

## ಕರ್ನಾಟಕದಲ್ಲಿ ಶ್ರೀಶಂಕರಾಚಾರ್ಯರು

ಭಾರತೀಯ ಚಿಂತನಾ ಪ್ರವಾಹದಲ್ಲಿ ಶಂಕರಾಚಾರ್ಯರ ಸ್ಥಾನ ಹಿರಿದು. ಇವರು ಕಾಲಡಿಯಲ್ಲಿ ಹುಟ್ಟಿ, ಗೌಡಪಾದರ ಶಿಷ್ಯ ಗೋವಿಂದ ಭಗವತ್ಪಾದರಲ್ಲಿ ಶಿಷ್ಯವೃತ್ತಿ ಮಾಡಿ, ಭಾರತವನ್ನೆಲ್ಲ ಸುತ್ತಿ, ವೇದಾಂತ ಪ್ರಸ್ಥಾನಗಳಿಗೆ ಭಾಷ್ಯ ರಚಿಸಿ ೩೨ನೇ ವರ್ಷದಲ್ಲೇ ಕೇದಾರನಾಥದ ಬಳಿ ನಿರ್ವಾಣ ಹೊಂದಿದರು ಎಂದು ನಂಬಿಕೆ. ಭಾಷ್ಯ ಬರೆದ ಆದಿಶಂಕರರು, ಷಣ್ಮತ ಸ್ಥಾಪನಾಚಾರ್ಯ ಕೃಪಾಶಂಕರರು, ವಾದಗಳಲ್ಲಿ ದಿಗ್ವಿಜಯ ಗಳಿಸುತ್ತಿದ್ದ ಉಜ್ವಲ ಶಂಕರರು ಮತ್ತು ಅಲ್ಪಾಯುವಾಗಿ ಸತ್ತ ಬಾಲಶಂಕರರು ಬೇರೆ ಬೇರೆ, ವಿವಿಧ ಕಾಲಗಳಲ್ಲಿದ್ದವರು ಎಂಬುದು ಇನ್ನೊಂದು ನಂಬಿಕೆ. ಶಂಕರರ ವಿಭಿನ್ನ ಜೀವನಗಳ ಪ್ರಕಾರ ಶಂಕರರು ಒಬ್ಬರೇ. ತಾವು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದನ್ನು ಇವರು ಕರ್ನಾಟಕದ ಶೃಂಗಗಿರಿಯಲ್ಲಿ ಸ್ಥಾಪಿಸಿದರು.

ದಿಗ್ವಿಜಯದ ನಂತರ ಶಂಕರರು ತೀರ್ಥಕ್ಷೇತ್ರಗಳನ್ನು ದರ್ಶಿಸುತ್ತ ಮಹಾರಾಷ್ಟ್ರದ ಮೂಲಕ ಶ್ರೀಶೈಲ, ಗೋಕರ್ಣಗಳನ್ನು ಸಂದರ್ಶಿಸಿ ಹರಿಶಂಕರ ದೇವಸ್ಥಾನದಲ್ಲಿ ಹರಿ-ಹರರನ್ನು ಸ್ತುತಿಸಿದರು. ಅನಂತರ ದಕ್ಷಿಣದ ಮೂಕಾಂಬಿಕೆಯ ದೇವಾಲಯಕ್ಕೆ ಬಂದರು. ಹಾದಿಯಲ್ಲಿ ಸತ್ತ ಮಗನನ್ನು ತೊಡೆಯ ಮೇಲಿರಿಸಿಕೊಂಡು ದುಃಖಿಸುತ್ತಿದ್ದ ತಾಯಿಯನ್ನು, ಏನು ಮಾಡಲೂ ತೋರದೆ ನಿಂತಿದ್ದ ತಂದೆಯನ್ನೂ ನೋಡಿ ಅವರ ಹೃದಯ ಕರಗಿತು. ಆಗ 'ಪರಿಹರಿಸುವ ಶಕ್ತಿಯಿಲ್ಲದೆ ಮರುಗುವುದು ವ್ಯರ್ಥ. ಅಂಥ ಮರುಕದಿಂದ ಆತಂಕವೊಂದೇ ಫಲ' ಎಂದು ಅಶರೀರವಾಣಿಯಾಯಿತು. ಶಂಕರರು 'ಪರಿಮಿತಿಗೆ ಒಳಪಟ್ಟ ಜೀವಿಗಳಿಗೆ ಅಸಾಧ್ಯವಾದುದನ್ನು ಮಾಡಲು ಸೃಷ್ಟಿಸ್ಥಿತಿ ಲಯಗಳಿಗೆ ಕಾರಣವಾದ ಶಕ್ತಿಯಿಂದ ಮಾತ್ರ ಸಾಧ್ಯ ಎಂದು ಕೇಳಿದ್ದೇನೆ' ಎಂದು ಉತ್ತರಿಸಿದರು. ಸತ್ತ ಮಗು ನಿದ್ದೆಯಿಂದ ಎದ್ದಂತೆ ಎದ್ದು ಕುಳಿತಿತು. ಎಲ್ಲರಿಗೂ ಆನಂದವಾಯಿತು.

ಶಂಕರರು ಪದ್ಮಪಾದರೇ ಮೊದಲಾದ ಶಿಷ್ಯರೊಡಗೂಡಿ ಪ್ರಯಾಣಿಸಿ ಋಷ್ಯಶೃಂಗರ ತಪೋಭೂಮಿ ಶೃಂಗಗಿರಿಗೆ ಬಂದರು. ಅಲ್ಲಿ ಯಜ್ಞಗಳನ್ನು ಆಚರಿಸುತ್ತ ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದ ಜನರು ಇದ್ದರು. ಅಲ್ಲಿನ ವಿದ್ವಾಂಸರಿಗೆ ತಮ್ಮ ಭಾಷ್ಯಗಳನ್ನು ವಿವರಿಸಿದ ಶಂಕರರು ಇಂದ್ರಲೋಕದ್ದು ಎಂಬಂತಿರುವ ದೇವಾಲಯವನ್ನು ನಿರ್ಮಿಸಿ, ಅಲ್ಲಿ ಶಾರದಾ ಎಂಬ ಹೆಸರಿನ ಶಕ್ತಿಯನ್ನು ಪ್ರತಿಷ್ಠಾಪಿಸಿದರು. ಉಭಯ ಭಾರತಿಯ ರೂಪದಲ್ಲಿದ್ದಾಗ ಆಕೆಯು ತಾನು ಶಂಕರರು ಸ್ಥಾಪಿಸಿದಲ್ಲಿ ಇರುವೆನೆಂದು ಮಾತು ಕೊಟ್ಟಿದ್ದಳು. ಈಗಲೂ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತ ಶಕ್ತಿಮಾತೆಯು ಅಲ್ಲಿ ನೆಲೆಸಿದ್ದಾಳೆ. **(ಸಂಗ್ರಹ : ಡಾ.ಎಚ್. ಪಾಂಡುರಂಗ ವಿಠಲ)**